ಕೆ. ಯಾಲಕ್ಕಿಗೌಡ
ನಿರ್ದೇಶಕರು, (ಪಂಚಾಯತ್ ರಾಜ್)
K. YALAKKI GOWDA
Director, (Panchayat Raj)

ಕರ್ನಾಟಕ ಸರ್ಕಾರ ಸಚಿವಾಲಯ
ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆ
Karnataka Government Secretariat
Rural Development & Panchayat Raj Department

ಅ.ಸ. ಪತ್ರ ಸಂ.ಗ್ರಾಅಪ 132 ಜಿಪಸ 2013

ದಿನಾಂಕ 05.10.2013

ಮಾನ್ಯರೆ,

**ಕಾಲಮಿತಿ**

**ವಿಷಯ:** ರಾಜೀವ ಗಾಂಧಿ ಪಂಚಾಯತಿ ಸಶಕ್ತೀಕರಣ ಅಭಿಯಾನ ಯೋಜನೆಯಡಿಯಲ್ಲಿ 2011-12ರಲ್ಲಿ ಹೊಸದಾಗಿ ಸೃಜಿಸಿರುವ ಗ್ರಾಮ ಪಂಚಾಯತಿಗಳಿಗೆ ಕಟ್ಟಡ ನಿರ್ಮಿಸುವ ಕುರಿತು.

******

ರಾಜೀವ್‌ಗಾಂಧಿ ಪಂಚಾಯತ ಸಶಕ್ತೀಕರಣ ಅಭಿಯಾನ ಯೋಜನೆಯು ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು, ಈ ಯೋಜನೆಯಡಿ ಪಂಚಾಯತ್ ರಾಜ್ ಸಂಸ್ಥೆಗಳನ್ನು ಸಾಂಸ್ಥಿಕ, ಆಡಳಿತಾತ್ಮಕ ಹಾಗೂ ಆರ್ಥಿಕವಾಗಿ ಸದೃಢಗೊಳಿಸಲು ಉದ್ದೇಶಿಸಲಾಗಿರುತ್ತದೆ. ಬೆಳಗಾವಿ ಜಿಲ್ಲೆಯ ರಾಯಬಾಗ ತಾಲ್ಲೂಕಿನ ಜಲಾಲಪುರ ಗ್ರಾಮ ಪಂಚಾಯತಿ ಹಾಗೂ ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿನ ಗಾಂಧಿನಗರ ಗ್ರಾಮ ಪಂಚಾಯತಿಗಳನ್ನು **ಕರ್ನಾಟಕ ಪಂಚಾಯತಿ ರಾಜ್ ಅಧಿನಿಯಮ-1993ರ ಪ್ರಕರಣ 4** ರನ್ವಯ ಹೊಸದಾಗಿ 2011-12ನೇ ಸಾಲಿನಲ್ಲಿ ಸೃಜಿಸಲಾಗಿರುತ್ತದೆ. ಈ ಗ್ರಾಮ ಪಂಚಾಯತಿಗಳ ಕಾರ್ಯಾಲಯಕ್ಕೆ ಹೊಸ ಕಟ್ಟಡಗಳನ್ನು ಪ್ರತಿ ಕಟ್ಟಡದ **ಅಂದಾಜು ವೆಚ್ಚ ರೂ. 12 ಲಕ್ಷ ಮಿತಿಯೊಳಗೆ** ನಿರ್ಮಿಸಲು ಉದ್ದೇಶಿಸಲಾಗಿದೆ. ತಾವು ಸಂಬಂಧಿಸಿದ ಗ್ರಾಮ ಪಂಚಾಯತಿಗೆ ಭೇಟಿ ನೀಡಿ, ಕಟ್ಟಡ ನಿರ್ಮಿಸಬೇಕಾದ ಸ್ಥಳವನ್ನು ಸಮೀಕ್ಷಿಸುವುದಲ್ಲದೇ ಆ ಗ್ರಾಮ ಪಂಚಾಯತಿಯಿಂದ ಸಾಮಾನ್ಯ ಸಭೆಯಲ್ಲಿ ನಿರ್ಣಯ ಕೈಗೊಂಡು ಪಂಚಾಯತ್ ರಾಜ್ ಇಂಜಿನಿಯರ್ ವಿಭಾಗದಿಂದ ಅಂದಾಜು ಪಟ್ಟಿ ಹಾಗೂ ವಾಸ್ತು ನಕಾಶೆಯನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಜರೂರಾಗಿ ಕಳುಹಿಸಿ ಕೊಡುವಂತೆ ಕೋರಲಾಗಿದೆ.

ಆದರಗಳೊಡನೆ,

ತಮ್ಮ ವಿಶ್ವಾಸಿ,

5/10/13

ಶ್ರೀ ಮುದ್ದುಮೋಹನ್
ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ,
**ರಾಯಚೂರು**

ಬಹುಮಹಡಿ ಕಟ್ಟಡ, 3ನೇ ಮಹಡಿ, ಬೆಂಗಳೂರು – 560 001 M.S. Building, 3rd Floor, Bangalore - 560 001
Tele : 080-2235 3925 / 2203 2533 Fax : 080-2235 3925 e-mail : pr.kar@nic.in